

# ಬನವಾಸಿ ವೆಂಕಟೇಶ ದೀಕ್ಷಿತ್

ಕಲೆ: ವಿಶ್ವನಾಥ್ ಎ.ಎಸ್

ಊರಿಗೆ ಕನ್ನಡ ಪತ್ರಿಕೆಗಳು ಬರುತ್ತಿದ್ದದ್ದು ಮೂರು; ಇಂಗ್ಲಿಷ್‌ಪತ್ರಿಕೆ ಓದುವವರು ಯಾರೂ ಇರಲಿಲ್ಲ. ಊರವರ ಭತ್ತ, ಶೇಂಗಾ, ಶುಂಠಿ ಮತ್ತಿತರ ಉತ್ಪನ್ನಗಳ ಖರೀದಿದಾರ ಮಂಡಿ ಸಾವುಕಾರ ಸಿದ್ದಪ್ಪನವರು ಕಾಳುಬೇಳೆ ಧಾರಣೆಯನ್ನು ನೋಡಲು ತರಿಸುತ್ತಿದ್ದ ಸಂಯುಕ್ತ ಕರ್ನಾಟಕ. ಅದನ್ನು ಶಾಲೆಯ ಮಾಸ್ತರು, ಮಂಡಿಗೆ ಬರುವ ಗಿರಾಕಿಗಳು, ರಾಜಕೀಯ ಕುರಿತು ಚರ್ಚೆ ಮಾಡುವ ಚಟವಿದ್ದುದಲ್ಲದೆ ಸ್ವಾತಂತ್ರ್ಯೋತ್ಸವ, ಗಣತಂತ್ರ ದಿವಸಗಳಲ್ಲಿ ಶಾಲೆಯಲ್ಲಿ ಆಯೋಜಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಭಾಷಣ ಮಾಡುವ ಹುರುಪಿದ್ದ ಊರಿನ ಗಂಗಣ್ಣ, ರಾಗಪ್ಪಸೆಟ್ಟರು, ರಾಜೇಂದ್ರ ಮುಂತಾಗಿ ಸಾಯಂಕಾಲದವರೆಗೂ ಓದುತ್ತಿದ್ದರು. ಉದಯವಾಣಿ ಪತ್ರಿಕೆಯನ್ನು ಊರಿನ ಏಕಮಾತ್ರ ಉಡುಪಿ ಹೋಟೆಲಿನ ರಾಘವೇಂದ್ರ ಹೊಳ್ಳ ತರಿಸುತ್ತಿದ್ದರು. ಗಲ್ಲಾದ ಮೇಲೆ ಕುಳಿತು ಪತ್ರಿಕೆಯನ್ನು ಒಂದೊಂದು ಪುಟಗಳಾಗಿ ಓದುತ್ತ, ನಡುನಡುವೆ ಚಿಕ್ಕ ಹಾಲಲ್ಲಿದ್ದ ನಾಕಾರು ಟೇಬಲ್ಲುಗಳ ಮೇಲೆ ಕಣ್ಣು ಹಾಯಿಸುತ್ತ ಕುಳಿತಿರುತ್ತಿದ್ದರು. ಆಮೇಲೆ ಪತ್ರಿಕೆ, ಹೋಟೆಲಿನಲ್ಲಿ ಬೆಳಿಗ್ಗೆಯೆ ಮಾಡಿಟ್ಟ ಇಡ್ಲಿ, ವಡೆ, ಖಾರಾಸೇವು ತಿನ್ನುತ್ತ ಚಹಾ ಕಾಫಿ ಕುಡಿಯುತ್ತ ಜಗತ್ತಿನ ಉಸಾಬರಿಗೆಲ್ಲ ತಲೆಹಾಕುತ್ತ ಹರಟುವ ಗಿರಾಕಿಗಳ ಕೈಗೆ ಸಿಕ್ಕು ನುಗ್ಗಾಗುತ್ತ ಬಣ್ಣ ವಾಸನೆಗಳನ್ನು ಬದಲಿಸಿಕೊಳ್ಳುತ್ತಿತ್ತು. ಮೂರನೆಯ 'ಪ್ರಜಾವಾಣಿ' ಬರುವುದು ಕುಂಬಾರ ಸತ್ಯಣ್ಣನ ಮನೆಗೆ. ಮುದುಕನಾಗಿರುವ ಸತ್ಯಣ್ಣ ಇಂಗ್ಲೀಷರ ವಿರುದ್ಧ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಹೋದವನು. ಆ ಕಾಲದಿಂದ ಸುದ್ದಿ ಸಮಾಚಾರಗಳಲ್ಲಿ ಆಸಕ್ತಿ ಬೆಳೆಸಿಕೊಂಡ ಮನೆ ಅದು.

ರೇಡಿಯೋದಲ್ಲಿ ಪ್ರಸಾರವಾಗುವ ಮೂರೂ ಹೊತ್ತಿನ ವಾರ್ತೆಯನ್ನು ತಪ್ಪದೆ ಕೇಳುತ್ತಾರೆ. ಪತ್ರಿಕೆಯನ್ನು ತರಿಸಿಕೊಂಡು ಓದಿ, ಧುರೀಣರಲ್ಲಿ ಅಧಿಕಾರಿಗಳಲ್ಲಿ ಜತೆಗೆ ಜನರಲ್ಲೂ ನಿಯತ್ತು ದಿನೇದಿನೇ ಹೇಗೆಲ್ಲ ಅಧೋಗತಿಗೆ ಇಳಿಯುತ್ತಿದೆ ಅಂತ ಅಲವತ್ತುಕೊಳ್ಳುವುದು ಸದಾ ಇರುತ್ತದೆ. ಇದಲ್ಲದೆ ಮೀನಿನ ವ್ಯಾಪಾರ ಮಾಡುವ ಮುರುಗನ್ ಮತ್ತು ನಾಟಾ ಕಂಟ್ರಾಕ್ಟು ಮಾಡುವ ಸೇತುಕುಟ್ಟಿ ಒಂದೊಂದು ತಮಿಳು ಮತ್ತು ಮಲಯಾಳಂ ಪತ್ರಿಕೆಯನ್ನು ತರಿಸಿಕೊಳ್ಳುತ್ತಾರೆ. ಮಂಡಿ ಸಾವುಕಾರ ಸಿದ್ದಪ್ಪನವರ ಮನೆಯಲ್ಲಿ ಮಾತ್ರ ಕೊಪ್ಪರಿಗೆಯಗಲದ ಡಿಶ್ ಹಾಕಿಸಿದ ಟೀವಿಯಿದೆ. ಹೀಗೆ ದೇಶದ ಆಗುಹೋಗುಗಳ ಮಾಹಿತಿ ಸಣ್ಣ ಊರಲ್ಲಿ ಸಂಚಾರಿಯಾಗಿರುತ್ತದೆ.

ಮುಂಗಾರುಮಳೆ ರಾತ್ರಿ ಸರಿಯಾಗೆ ಬಿದ್ದು ಗದ್ದೆಯಲ್ಲಿ ನೀರಾಗಿತ್ತು. ಕೇದಾರ ಬೆಳಿಗ್ಗೆಯೆ ಗದ್ದೆಗೆ ಹೋಗಿದ್ದ. ಸತ್ಯಣ್ಣ ತಿಂಡಿ ಮುಗಿಸಿದವ ಒಳಜಗುಲಿಯ ಮೇಲೆ ಪತ್ರಿಕೆಯನ್ನು ಹರಡಿಕೊಂಡು ಓದುತ್ತ ಕುಳಿತಿದ್ದವ 'ಅಂತೂ... ಪರಿಹಾರ ಕಂಡುಹಿಡಿದ್ರು ಅಂತಾತು!' ತಲೆಯಮೇಲೆ ಅಂಗೈಯಾಡಿಸುತ್ತ ನಿರಾಳವಾದಂತೆ ಉದ್ಗರಿಸಿದ. 'ವೈಟೂಕೆ' ಅಂತ ಒಂದು ಸಮಸ್ಯೆ ಪತ್ರಿಕೆಯಲ್ಲಿ ರೇಡಿಯೊ ಸುದ್ದಿಗಳಲ್ಲಿ ಈಗೀಗ ಸದಾ ಚರ್ಚೆಯಲ್ಲಿರುತ್ತಿತ್ತು. ಒಂದುವರ್ಷದಲ್ಲಿ ಏನಾದರೂ ಮಾಡದಿದ್ದರೆ ಜಗತ್ತಿನ ದೊಡ್ಡದೊಡ್ಡ ಕಂಪನಿಗಳ ವ್ಯವಹಾರ ಹಳ್ಳ ಹಿಡಿಯುತ್ತದೆ, ಬ್ಯಾಂಕುಗಳಲ್ಲಿ ಹಣವಿಟ್ಟವರ ಖಾತೆಗಳು ಅಲ್ಲೋಲಕಲ್ಲೋಲವಾಗಬಹುದು, ರೈಲು ವಿಮಾನದಲ್ಲಿ ಮುಂಗಡ ಕಾಯ್ದಿರಿಸಿದವರಿಗೆ ಸೀಟೇ ಇಲ್ಲದಂತಾಗಬಹುದು ಹೀಗೆಲ್ಲ ಸುದ್ದಿಗಳು ಹರಡುತ್ತಿದ್ದವು. ಕಂಪ್ಯೂಟರ್ ಬಗ್ಗೆ ಗೊತ್ತಿಲ್ಲದವರಲ್ಲೂ ಏನೋ ಒಂದು ಗಂಡಾಂತರ ಈ ವರ್ಷವೇ ಕಾದಿದೆ ಅನ್ನುವ ಆತಂಕ ಹರಡಿತ್ತು. 'ಅಮೇರಿಕದವರು ಕೊನೆಗೂ ಎರಡು ಸಾವಿರದ ಸಮಸ್ಯೆಗೆ ಒಂದು